
# 'ಶ್ರೀ ಶ್ರೀರಾಮಕೃಷ್ಣ ಪೂಂಥಿ'

ವಿ. ಮೀನಾ



ಮೂಕಂ ಕರೋತಿ ವಾಚಾಲಂ
ಪಂಗುಂ ಲಂಘಯತೇ ಗಿರಿಮ್ ।
ಯತ್ ಕೃಪಾ ತಮಹಂ ವಂದೇ
ಪರಮಾನಂದ ಮಾಧವಮ್ ॥

ಎಂಬ ಪ್ರಸಿದ್ಧವಾದ ಶ್ಲೋಕವಿದೆ. ಇದರ ಅರ್ಥ "ಯಾರು ಭಗವಂತನ ಕೃಪೆಗೆ ಪಾತ್ರರಾಗುತ್ತಾರೋ ಅವರು ಮೂಕರಾಗಿದ್ದರೂ ವಾಚಾಳಿಗಳಾಗುತ್ತಾರೆ, ಕುಂಟರಾದರೂ ಬೆಟ್ಟವನ್ನೇ ದಾಟುತ್ತಾರೆ" ಎಂದು. ಇದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದ್ದಾರೆ, **'ಶ್ರೀ ಶ್ರೀರಾಮಕೃಷ್ಣ ಪೂಂಥಿ'** ಎಂಬ ಮಹಾನ್ ಕಾವ್ಯದ ಕರ್ತೃವಾದ ಶ್ರೀ ಅಕ್ಷಯಕುಮಾರ ಸೇನ್. ಭಗವಾನ್ ಶ್ರೀರಾಮಕೃಷ್ಣರ ಕೃಪಾದೃಷ್ಟಿಗೆ ಪಾತ್ರರಾಗಿ, ತಮ್ಮಲ್ಲಿ ಸುಪ್ತವಾಗಿದ್ದ ಕವಿತಾಶಕ್ತಿಯನ್ನು ಜಾಗ್ರತಗೊಳಿಸಿಕೊಂಡು ಶ್ರೀರಾಮಕೃಷ್ಣರ ದಿವ್ಯ ಜನ್ಮ, ದಿವ್ಯ ಲೀಲೆ, ದಿವ್ಯ ಕರ್ಮ ಹಾಗೂ ದಿವ್ಯ ತತ್ತ್ವಗಳನ್ನು ವಿಶದಪಡಿಸಲೆಂದೇ ಈ ಬೃಹತ್ ಕೃತಿಯನ್ನು ರಚಿಸಿರುವ ಇವರ ಭಾಗ್ಯವೇ ಭಾಗ್ಯ.

ಶ್ರೀರಾಮಕೃಷ್ಣರು ಮಹಾನ್ ವಿಭೂತಿಪುರುಷರು. ಅವರ ಮಹಿಮೆಯನ್ನು ಮನೋಹರ ಶೈಲಿಯಲ್ಲಿ ವರ್ಣಿಸಿರುವ ಮಹಾಕಾವ್ಯ 'ರಾಮಕೃಷ್ಣ ಪೂಂಥಿ.' ಬಂಗಾಳಿ ಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಈ ಗ್ರಂಥದ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿಯು ಬಂಗಾಳಿ ಭಾಷೆಯಲ್ಲಿ ನುರಿತವರಾಗಿದ್ದಾರೆ. ಇವರು ಬೆಂಗಳೂರಿನ ರಾಮಕೃಷ್ಣ ಮಠದ ಭಕ್ತರು.

## ಪೂಜ್ಯರ ಪ್ರಶಂಸೆ

'ಶ್ರೀ ಶ್ರೀರಾಮಕೃಷ್ಣ ಪೂಂಥಿ' ಒಂದು ಅಪೂರ್ವ ಕೃತಿ. ಅದಕ್ಕೆ ಶ್ರೀಮಾತೆ ಶ್ರೀಶಾರದಾದೇವಿಯವರ ಆಶೀರ್ವಾದ ಲಭಿಸಿದೆ. ಪೂಜ್ಯಪಾದರಾದ ಶ್ರೀಮತ್ ಸ್ವಾಮಿ ವಿವೇಕಾನಂದರೂ ಇದಕ್ಕೆ ತಮ್ಮ ಹೃತ್ಪೂರ್ವಕವಾದ ಪ್ರಶಂಸೆ ಹಾಗೂ ಹರಕೆಗಳನ್ನು ನೀಡಿದ್ದಾರೆ. ಪೂಜ್ಯ ಸ್ವಾಮಿ ಶಿವಾನಂದರು, ಸ್ವಾಮಿ ಅದ್ಭುತಾನಂದರು ಮೊದಲಾದ ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರು ಇದನ್ನು ಮನಸಾರೆ ಕೊಂಡಾಡಿದ್ದಾರೆ.

ಶ್ರೀರಾಮಕೃಷ್ಣ ಪೂಂಥಿಯನ್ನು ಓದಿ ಸ್ವಾಮಿ ವಿವೇಕಾನಂದರು ಅಮೇರಿಕಾದಿಂದ ತಮ್ಮ ಸಹೋದರ ಸಂನ್ಯಾಸಿಗಳಾದ ಸ್ವಾಮಿ ರಾಮಕೃಷ್ಣಾನಂದರಿಗೆ ಹೀಗೆ ಪತ್ರ ಬರೆದು ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ: "ಈಗ ತಾನೆ ನಾನು ಅಕ್ಷಯನ ಪುಸ್ತಕವನ್ನು ಓದಿದೆ. ನನ್ನ ನೂರಾರು ಆಲಿಂಗನಗಳನ್ನು ಅವನಿಗೆ ಕೊಡು. ಆತನ ಲೇಖನಿಯಿಂದ ಶ್ರೀರಾಮಕೃಷ್ಣರು ತಮ್ಮನ್ನು ತಾವೇ ಪ್ರಕಟಿಸಿಕೊಳ್ಳುತ್ತಿದ್ದಾರೆ. ಅಕ್ಷಯ ಧನ್ಯ! ಆತನು ತನ್ನ ಈ ಕೃತಿಯನ್ನು ಎಲ್ಲರ ಮುಂದೆಯೂ ಓದಲಿ. ಅದು ಎಲ್ಲಾ ದೃಷ್ಟಿಯಿಂದಲೂ ಉತ್ತಮವಾಗಿದೆ. ಈ ಪೂಂಥಿಯನ್ನು ಓದಿ ನನಗಾದ ಸಂತೋಷವನ್ನು ನಾನು ವರ್ಣಿಸಲಾರೆ. ಇದರ ಮಾರಾಟಕ್ಕೆ ನೀವೆಲ್ಲರೂ ಸಹಾಯ ಮಾಡಿರಿ. ಅಕ್ಷಯನು ಹಳ್ಳಿಹಳ್ಳಿಗೂ ಹೋಗಿ ಇದನ್ನು ಬೋಧಿಸಲಿ. ಬಹಳ ಒಳ್ಳೆಯ ಕೆಲಸ ಮಾಡಿದ್ದಾನೆ ಅಕ್ಷಯ. ಈ ಮೂಲಕ ಅವನು ಶ್ರೀರಾಮಕೃಷ್ಣರ ಕಾರ್ಯವನ್ನೇ ಮಾಡುತ್ತಿದ್ದಾನೆ! ಇದಕ್ಕಿಂತ ಧನ್ಯವಾದ ಕೆಲಸ ಬೇರೆ ಉಂಟೆ? ರಾಮಕೃಷ್ಣ ಪೂಂಥಿ ಹಾಗೂ ಸ್ವಯಂ ಅಕ್ಷಯ –ಇವೆರಡೂ ಜನರಿಗೆ ಚೈತನ್ಯವನ್ನು ನೀಡಲಿ. ಅಕ್ಷಯ! ನನ್ನ ಪ್ರೀತಿಯ ಸಹೋದರ! ನಾನು ನಿನ್ನನ್ನು ಹೃದಯಪೂರ್ವಕನಾಗಿ ಆಶೀರ್ವದಿಸುತ್ತೇನೆ. ಪ್ರಭು ನಿನ್ನ ನಾಲಿಗೆಯಲ್ಲಿ ನೆಲೆಸಲಿ. ಮನೆಮನೆಗೂ ಶ್ರೀರಾಮಕೃಷ್ಣರ ಹೆಸರನ್ನು ಮತ್ತು ಸಂದೇಶವನ್ನು ತಲುಪಿಸು. ಅಕ್ಷಯನು ಬಂಗಾಳದ ಮುಂದಿನ ದೇವಸುತ. ಆತನನ್ನು ಚೆನ್ನಾಗಿ ರಕ್ಷಣೆ ಮಾಡಿರಿ."

ರಾಮಕೃಷ್ಣ ಮಹಾಸಂಘದ ಎರಡನೆಯ ಅಧ್ಯಕ್ಷರಾದ ಸ್ವಾಮಿ ಶಿವಾನಂದಜಿ ಅವರು, ಅಕ್ಷಯ ಕುಮಾರ ಸೇನರು ಈ ಪೂಂಥಿಯನ್ನು ಹೇಗೆ ಬರೆದರು ಎಂಬುದನ್ನು ವಿವರಿಸುತ್ತ ಹೀಗೆ ಹೇಳುತ್ತಾರೆ: "ಅಕ್ಷಯನು ಅನೇಕ ಜನರಿಗೆ ಸಹಾಯ ಮಾಡಿದ್ದಾನೆ. ಆತನದು ಬಹಳ ಒಳ್ಳೆಯ ಗುಣ. ಅವನು ಭಕ್ತ, ಆದರೆ ಬಡವ. ಆತ ತನ್ನ ಪೂಂಥಿಯಲ್ಲಿ ಬರೆದ ವಿಚಾರಗಳು ಬಹು ಸುಂದರವಾಗಿವೆ. ಅವನು ಬರೆದ ವೃತ್ತಾಂತ ಗಳೆಲ್ಲ ಬಹುಮಟ್ಟಿಗೆ ನಮಗೆ ಗೊತ್ತೇ ಇರಲಿಲ್ಲ. ಅಕ್ಷಯ ಅವನ್ನೆಲ್ಲಾ ಶ್ರೀರಾಮಕೃಷ್ಣರ ಸಮಕಾಲೀನರ ಬಳಿ, ಕಾಮಾರ ಪುಕುರ, ಹೌರಾ ಮುಂತಾದ ಸ್ಥಳಗಳಲ್ಲಿ ಸಂಗ್ರಹಿಸಿದ್ದಾನೆ. ಅನಂತರ ಕಾವ್ಯಮಯವಾದ ಶೈಲಿಯಲ್ಲಿ 'ರಾಮಾಯಣ', 'ಮಹಾಭಾರತ' ಮತ್ತಿತರ ಪುರಾಣ ಇತಿಹಾಸಗಳಂತೆ ಎಲ್ಲರಿಗೂ ಅರ್ಥವಾಗುವಂತೆ ಈ ಕೃತಿಯನ್ನು ರಚಿಸಿದ್ದಾನೆ. ಇದನ್ನು ಅವನು ಸರಳ ಗ್ರಾಮ್ಯ ಭಾಷೆಯಲ್ಲಿ ಬರೆದಿದ್ದಾನೆ. ಆದರೆ ಅನೇಕ ವಿದ್ಯಾವಂತರೂ ಇದನ್ನು ಮೆಚ್ಚಿ ಕೊಂಡಾಡಿದ್ದಾರೆ. ಅಕ್ಷಯನೇನೂ ದೊಡ್ಡ ಪಂಡಿತನಲ್ಲ, ಆದರೆ ಪ್ರಾಮಾಣಿಕ ಭಕ್ತ. ನಾನು ಕೇಳಿದ್ದೇನೆ, ಈತ ರಾತ್ರಿಯ ಸಮಯದಲ್ಲಿ ಗಂಗಾತೀರಕ್ಕೆ ಹೋಗಿ ವ್ಯಾಕುಲತೆಯಿಂದ ಶ್ರೀರಾಮಕೃಷ್ಣರಲ್ಲಿ ಹೀಗೆ ಮೊರೆಯಿಡುತ್ತಿದ್ದನಂತೆ: 'ಓ! ಗುರುದೇವಾ, ನಿನ್ನ ಮಹಿಮಾಮಯವಾದ ಜೀವನವನ್ನು ರಚಿಸಲು ಶಕ್ತಿಯನ್ನು ನೀಡು' ಎಂದು. ಹೀಗೆ ಆತ ಎಡೆಬಿಡದೆ ಪ್ರಾರ್ಥನೆ ಮಾಡು ತ್ತಿದ್ದ. ಆಗ ಅವನ ಅಂತರ್ಯದಲ್ಲಿ ಸ್ಫೂರ್ತಿಯ ಬುಗ್ಗೆಯು ಸ್ಫುರಿಸಲು ಆರಂಭಿಸಿದ ತಕ್ಷಣ ತನ್ನ ಮನೆಗೆ ವಾಪಸ್ಸಾಗಿ ಬರೆಯಲು ಕುಳಿತುಕೊಳ್ಳುತ್ತಿದ್ದನಂತೆ."

ಒಮ್ಮೆ ದಕ್ಷಿಣೇಶ್ವರದಲ್ಲಿ ರಾಮಕೃಷ್ಣ ಪೂಂಥಿಯನ್ನು ಅಕ್ಷಯ ಕುಮಾರ ಸೇನರು ಓದುತ್ತಿದ್ದರು. ಆಗ ಸ್ವಾಮಿ ಅದ್ಭುತಾ ನಂದರೂ ಅಲ್ಲಿದ್ದರು. ಇದನ್ನು ಆಲಿಸಿದ ಅವರು ಹೇಳುತ್ತಾರೆ: "ಅಕ್ಷಯ ಬಾಬು, ನೀನು ಜನರಿಗೆ ಒಂದು ದೊಡ್ಡ ಸೇವೆ ಯನ್ನು ಸಲ್ಲಿಸಿರುವೆ. ಶ್ರೀರಾಮಕೃಷ್ಣರ ಜೀವನವನ್ನು ಅದೆಷ್ಟು ಸುಂದರವಾಗಿ ನೀನು ರಚಿಸಿರುವೆ ಎಂದರೆ ಸ್ತ್ರೀಯರೂ ಸಹ ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು" (ಆ ಕಾಲದಲ್ಲಿ ಸ್ತ್ರೀವಿದ್ಯಾಭ್ಯಾಸ ಅಷ್ಟೊಂದು ಪ್ರಚುರವಿರಲಿಲ್ಲ). ಆಗ ನಮ್ಮ ದೇಶ ಐರೋಪ್ಯರ ಆಡಳಿತದಲ್ಲಿದ್ದು ನಮ್ಮ ಜನರಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ, ಬಹುತೇಕ ಜನರು ಅವಿದ್ಯಾವಂತ ರಾಗಿದ್ದರು, ದಾರಿದ್ರ್ಯದಿಂದ ಹಾಗೂ ದಾಸ್ಯದಿಂದ ನರಳು ತ್ತಿದ್ದರು. ಅವರಿಗೆಲ್ಲ ಉಚ್ಚ ಅದ್ವೈತ ತತ್ತ್ವವಾಗಲಿ, ಉಪನಿಷತ್ತಿನ ಸಂದೇಶವಾಗಲಿ, ಗೀತೋಪದೇಶವಾಗಲಿ ಅರ್ಥವಾಗುವ ಸಂಭವವಿರಲಿಲ್ಲ. ಅಂತಹ ಬಹಳಷ್ಟು ಸರಳ ಗ್ರಾಮೀಣ ಜನರಿಗೆ ರಾಮಕೃಷ್ಣ ಪೂಂಥಿ ಗ್ರಂಥವು ಸುಲಭವಾಗಿ ಜೀರ್ಣಿಸಿ ಕೊಳ್ಳಬಲ್ಲ ರಸಕವಳದಂತೆ ಇತ್ತು. ಜನಸಾಮಾನ್ಯರಿಗೆ, ಭಾವುಕ ರಿಗೆ, ತತ್ತ್ವಕ್ಕಿಂತ ಹೆಚ್ಚಾಗಿ ವ್ಯಕ್ತಿತ್ವ, ಅದರಲ್ಲೂ ಭಗವಂತನ ಅವತಾರದ ಮಾನವೀಯ ಭಾವನೆಗಳು, ನಾನಾ ರೀತಿಯ ದಿವ್ಯ ಲೀಲೆಗಳು ಮತ್ತು ಘಟನೆಗಳ ವರ್ಣನೆ ಆಪ್ಯಾಯಮಾನ ವಾಗುತ್ತವೆ, ಮುಗ್ಧಜನರ ಮನಸ್ಸನ್ನು ಅಪಹರಿಸುತ್ತವೆ. ಹಾಗೆಂದೇ ಬಂಗಾಳ ದೇಶದಲ್ಲಿ ರಾಮಕೃಷ್ಣ ಪೂಂಥಿ ಜನಸಾಮಾನ್ಯರಲ್ಲಿಯೂ ಅತ್ಯಂತ ಪ್ರಸಿದ್ಧವಾಯಿತು. ವಾತ್ಸಲ್ಯ, ಸಖ್ಯ, ಶಾಂತ, ದಾಸ್ಯ ಮುಂತಾದ ಸಹಜ ಮಾನವೀಯ ಭಾವನೆಗಳ ನೆರವಿನಿಂದ ಭಗವಂತನ ಬಳಿಸಾರುವ ಸುಲಭ ಮಾರ್ಗವನ್ನು ಇಲ್ಲಿ ಎತ್ತಿ ತೋರಿಸಲಾಗಿದೆ. ರಾಮಕೃಷ್ಣ ಪೂಂಥಿಯ ಶೈಲಿ ಸರಳ, ಸುಂದರ; ಭಾವ ಭಕ್ತಿರಸ ಪ್ರಧಾನ. ಭಗವಂತನ ಲೀಲಾಸ್ವಾದನೆಗೆ ಮಾನವಕೋಟಿಗೆ ದೊರಕಿದ ಬಹು ದೊಡ್ಡ ಕೊಡುಗೆ ಈ ರಾಮಕೃಷ್ಣ ಪೂಂಥಿ.

## ಧನ್ಯ ಅಕ್ಷಯ!

ಅಕ್ಷಯಕುಮಾರ ಸೇನರು ಜನ್ಮ ತಾಳಿದ್ದು ೧೮೫೪ ರಲ್ಲಿ, ಬಾಂಕುರಾ ಜಿಲ್ಲೆಗೆ ಸೇರಿದ ಮಯನಾಪುರವೆಂಬ ಕುಗ್ರಾಮದಲ್ಲಿ. ಶಾಲೆಯಲ್ಲಿ ಓದುವ ಸಮಯದಿಂದಲೂ ಇವರಿಗೆ ಶ್ರೀಕೃಷ್ಣನೆಂದರೆ ಬಹಳ ಪ್ರೀತಿ. ಜೀವನೋಪಾಯಕ್ಕಾಗಿ ಕೊಲ್ಕತಾಗೆ ಬಂದ ಅಕ್ಷಯರು ದೊಡ್ಡ ಜಮೀನುದಾರನೊಬ್ಬನ ಮನೆಯಲ್ಲಿ ಖಾಸಗಿ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಅಲ್ಲಿಯೇ ಕೆಲಸಮಾಡುತ್ತಿದ್ದ ದೇವೇಂದ್ರನಾಥ ಮಜುಂದಾರರೊಡನೆ ಪರಿಚಯವಾಯಿತು. ಅವರಿಂದ ಭಗವಾನ್ ಶ್ರೀರಾಮಕೃಷ್ಣರ ಹೆಸರು ಕೇಳಿ ತಿಳಿದ ಅಕ್ಷಯಕುಮಾರರು, ೧೮೮೫ ರಲ್ಲಿ ಮಹಿಮಾ ಚಕ್ರವರ್ತಿಗಳ ಮನೆಯಲ್ಲಿ ನಡೆದ ಒಂದು ಉತ್ಸವದ ಸಂದರ್ಭದಲ್ಲಿ, ಶ್ರೀರಾಮಕೃಷ್ಣರನ್ನು ಮೊಟ್ಟಮೊದಲು ಭೇಟಿ ಮಾಡಿದರು. ದೇವೇಂದ್ರರೊಂದಿಗೆ ಇವರೂ ನಮಸ್ಕರಿಸಿದಾಗ ಶ್ರೀರಾಮಕೃಷ್ಣರು ಮುಗುಳುನಕ್ಕರು ಹಾಗೂ ಅವರೆಡೆಗೆ ಕೃಪಾದೃಷ್ಟಿಯನ್ನು ತೋರಿದರು. ಎರಡನೆಯ ದರ್ಶನದಲ್ಲಿ ಶ್ರೀರಾಮಕೃಷ್ಣರು ಅಕ್ಷಯರ ಖಾಸಗಿ ಬದುಕಿನ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಈ ರೀತಿ ಹಲವಾರು ಬಾರಿ ಶ್ರೀರಾಮಕೃಷ್ಣರ ಸಾಹಚರ್ಯಕ್ಕೆ ಬಂದ ಅಕ್ಷಯರಿಗೆ, ಯಾರಾದರೂ ತಮಗೆ ಭಗವಂತನ ದರ್ಶನ ಮಾಡಿಸಬಹುದೆಂದರೆ, ಅದು ಕೇವಲ ಭಗವಾನ್ ಶ್ರೀರಾಮಕೃಷ್ಣರೊಬ್ಬರೇ ಎಂಬ ದೃಢವಾದ ವಿಶ್ವಾಸ ಉಂಟಾಯಿತು.

ತಮ್ಮ ದಿವ್ಯಲೀಲೆಯನ್ನು ಸಮಾಪ್ತಿಗೊಳಿಸುವ ಮುನ್ನ ಜನವರಿ ೧, ೧೮೮೬ ರಂದು ಶ್ರೀರಾಮಕೃಷ್ಣರು ಕಾಶೀಪುರದ ಉದ್ಯಾನವನದಲ್ಲಿ ದಿವ್ಯ ಕಲ್ಪತರುವಾಗಿ ಎಲ್ಲರನ್ನೂ ಆಶೀರ್ವದಿ ಸಿದರು. ಆ ಆನಂದದ ದಿನ ಅಕ್ಷಯಕುಮಾರರೂ ಅಲ್ಲಿದ್ದರು. ಗುರುದೇವರನ್ನು ಕಂಡೊಡನೆಯೇ ಅವರ ಪಾದಗಳ ಮೇಲೆ ಎರಡು ಹೂವುಗಳನ್ನಿಟ್ಟು ನಮಸ್ಕರಿಸಿದರು ಹಾಗೂ ಸಂಕೋಚ ದಿಂದ ತುಸು ದೂರದಲ್ಲಿ ನಿಂತರು. ಶ್ರೀರಾಮಕೃಷ್ಣರು ಆದರ ದಿಂದ ಅವರನ್ನು ಬಳಿಗೆ ಕರೆದು, ಎದೆಯನ್ನು ಮುಟ್ಟಿ

ಆಶೀರ್ವದಿಸಿ ಅವರ ನಾಲಿಗೆಯ ಮೇಲೆ ಬೀಜಾಕ್ಷರ ವನ್ನು ಬರೆದರು. ಆ ದಿವ್ಯಸ್ಪರ್ಶದಿಂದ ಪುಳಕಿತರಾದ ಅಕ್ಷಯರು ಭಾವಾವೇಗವನ್ನು ತಡೆಯಲಾರದೆ ಕಂಬನಿಗರೆಯುತ್ತಾ ಕೆಳಗೆ ಕುಳಿತರು. ನಂತರ ತಮ್ಮ ಶ್ರೀಗುರುವಿನ ಮಹಾಸಮಾಧಿಯ ದಿವಸ, ನರೇಂದ್ರನಾಥರ (ಮುಂದೆ ಸ್ವಾಮಿ ವಿವೇಕಾನಂದರು) ಆಶಯದಂತೆ ಶ್ರೀರಾಮಕೃಷ್ಣರ ಪವಿತ್ರ ದೇಹಕ್ಕೆ ಗಾಳಿಬೀಸುವ ಸೇವೆಯನ್ನು ಮಾಡಿ ಧನ್ಯರಾದರು.

ತಮ್ಮ ಶ್ರೀಗುರುವಿನ ಮಹಾಸಮಾಧಿಯ ಬಳಿಕ ಅಕ್ಷಯರು ಶ್ರೀರಾಮಕೃಷ್ಣರ ಭಾವಚಿತ್ರವನ್ನು ಹೂವುಗಳಿಂದ ಅಲಂಕರಿಸಿ, ಒಂದು ತಂತಿಯ ವಾದ್ಯದೊಂದಿಗೆ ಅನೇಕ ಭಕ್ತಿಯುತ ಹಾಡುಗಳನ್ನು ಹಾಡುತ್ತ, ಅವರನ್ನು ಸ್ತುತಿಸುತ್ತಿದ್ದರು. ಇದೇ ಸಮಯದಲ್ಲಿ ಭಕ್ತ ದೇವೇಂದ್ರ ಮಜುಂದಾರರು ಅಕ್ಷಯರಿಗೆ ಶ್ರೀರಾಮಕೃಷ್ಣರ ಬಗೆಗೆ ಏನಾದರೂ ಬರೆಯ ಬೇಕೆಂದು ಒತ್ತಾಯ ಮಾಡಿದರು. ಅದನ್ನು ಅಕ್ಷಯರು ದಿವ್ಯಸಂದೇಶವನ್ನಾಗಿ ಸ್ವೀಕರಿಸಿ, ಶ್ರೀರಾಮಕೃಷ್ಣ ಪೂಂಥಿಯನ್ನು ರಚಿಸಿದರು. ಅಕ್ಷಯಕುಮಾರರ ಶ್ರೀರಾಮಕೃಷ್ಣ ಪೂಂಥೀ ಬಂಗಾಳದ ಶ್ರೇಷ್ಠ ಕವಿ ಕೃತ್ತಿವಾಸರ 'ರಾಮಾಯಣ' ಹಾಗೂ ಇನ್ನೊಬ್ಬ ಮಹಾನ್ ಕವಿ ಕಾಶೀ ರಾಮದಾಸರ 'ಮಹಾಭಾರತ' ಗಳ ಶೈಲಿಯಲ್ಲಿದೆ. ಅಕ್ಷಯರು ಕಾಮಾರಪುಕುರ, ಜಯರಾಂ ಬಾಟಿಗಳಿಗೆ ಹೋದಾಗಲೆಲ್ಲಾ, ಅದನ್ನು ಹಳ್ಳಿಯವರ ಮುಂದೆ, ವಿಶೇಷವಾಗಿ ಶ್ರೀಮಾತೆಯವರ ದಿವ್ಯ ಸಾನ್ನಿಧ್ಯದಲ್ಲಿ, ವಾಚನ ಮಾಡಿ, ಅವರ ವಿಶೇಷ ಕೃಪಾಶೀರ್ವಾದಗಳಿಗೆ ಭಾಗಿಯಾದರು. ಪೂಂಥಿಯ ಆಕರಗಳಿಗಾಗಿ ಅಕ್ಷಯರು ಶ್ರೀಯುತ ಗಿರೀಶ್ ಚಂದ್ರ, ಸ್ವಾಮಿ ಯೋಗಾನಂದ, ಸ್ವಾಮಿ ನಿರಂಜನಾನಂದ ಮತ್ತು ಸ್ವಾಮಿ ರಾಮಕೃಷ್ಣಾನಂದ – ಮೊದಲಾದವರ ಸಹಾಯ ವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದ್ದಾರೆ.

### ಶ್ರೀರಾಮಕೃಷ್ಣ ಪೂಂಥಿಯ ಒಳಹೂರಣ

ಮೊದಲ ಬಾರಿಗೆ ಶ್ರೀರಾಮಕೃಷ್ಣ ಪೂಂಥಿಯು ನಾಲ್ಕು ಭಾಗ ಗಳಲ್ಲಿ ಪ್ರಕಟವಾಯಿತು. ನಂತರ ೧೯೦೧ ರಲ್ಲಿ ಒಂದೇ ಸಂಪುಟವಾಗಿ ಪ್ರಕಟವಾಯಿತು. ಪೂಂಥಿಯನ್ನು ಐದು ಭಾಗ ಗಳಲ್ಲಿ ವಿಂಗಡಿಸಲಾಗಿದೆ. ಅದರಲ್ಲಿ ೯೧ ಅಧ್ಯಾಯ ಗಳಿವೆ. ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿ ಯವರನ್ನು ಕುರಿತಾದ ಸ್ತುತಿ ಮೊದಲಿಗೆ ಇದೆ. ಸುಮಾರು ೨೦೦ ಕ್ಕೂ ಹೆಚ್ಚು ಶ್ರೀರಾಮಕೃಷ್ಣರ ಭಕ್ತರ ಹೆಸರುಗಳನ್ನು ಕವಿ ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಅವರ ಹೆಸರುಗಳು ಪೂಂಥಿಯಲ್ಲಿ ಪದೇ ಪದೇ ಬರುತ್ತವೆ. ಕವಿ ತಾವು ಶ್ರೀರಾಮ ಕೃಷ್ಣರ ಸಂಪರ್ಕಕ್ಕೆ ಬಂದ ಮೇಲೆ, ಯಾವ ರೀತಿ ತಮ್ಮ ಜೀವನ ಸರ್ವಾಂಗಸುಂದರವಾಗಿ ರೂಪುಗೊಂಡಿತು ಎಂಬು ದನ್ನು ಹೇಳುತ್ತಾರೆ. ಅಕ್ಷಯರು ಪೂಂಥಿಯಲ್ಲಿ ಅಲ್ಲಲ್ಲಿ ತಮ್ಮ ಮನಸ್ಸನ್ನು ಉದ್ದೇಶಿಸಿ, "ಎಲೈ ಮನಸ್ಸೇ ಕೇಳು" ಎಂದು ಉಲ್ಲೇಖಿಸುತ್ತ, ಆ ಮೂಲಕ ಇತರರಿಗೆ ಉಪದೇಶವೀಯುತ್ತಾರೆ. ಇದು ಪುರಾಣಗಳ ರಚನಾಶೈಲಿಯಂತಿದೆ. ಅನೇಕ ಪ್ರಖ್ಯಾತ ಸಂಗೀತಗಾರರೂ ಈ ರೀತಿ ಬರೆದಿರುವುದುಂಟು. ಉದಾಹರಣೆಗೆ ತ್ಯಾಗರಾಜ ಸ್ವಾಮಿಗಳು ಅನೇಕ ಕಡೆ "ಓ ಮನಸೇ" ಎಂದು ಬರೆದಿದ್ದಾರೆ (ಉದಾ: ಭಜನ ಸೇಯವೇ ಓ ಮನಸಾ).

ಪೂಂಥಿಯ ಮೊದಲ ಭಾಗದಲ್ಲಿ ಶ್ರೀರಾಮಕೃಷ್ಣರ ದಿವ್ಯ ಜನನ, ಅವರ ಮಾತಾಪಿತೃಗಳ ಕುರಿತಾಗಿ ಹೇಳುತ್ತ, ಯಾವ ರೀತಿ ಅವರು ಸುಂದರ ವಸ್ತುಗಳನ್ನು, ನೋಟಗಳನ್ನು ನೋಡಿ ದಾಗ, ಭಗವದಭಿನಯ ಮಾಡುವಾಗ, ಭಗವಂತನ ನಾಮಗುಣ ಕೀರ್ತನೆ ಕೇಳಿದಾಗ, ಸಹಜವಾಗಿ ಭಾವಾವಸ್ಥೆಗೆ ಹೋಗುತ್ತಿದ್ದರು ಎನ್ನುವುದನ್ನು ವರ್ಣಿಸಲಾಗಿದೆ. ಎರಡನೆಯ ಭಾಗದಲ್ಲಿ ಪುಟ್ಟ ಗದಾಧರ ದೊಡ್ಡವನಾದದ್ದು, ತಮ್ಮ ಹಿರಿಯ ಸಹೋದರ ರಾಮಕುಮಾರರೊಂದಿಗೆ ಕೊಲ್ಕತಾಗೆ ಬಂದ ವಿಚಾರವನ್ನು ವಿವರಿಸಲಾಗಿದೆ. ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಶ್ರೀರಾಮ ಕೃಷ್ಣರ ವಾಸ್ತವ್ಯ, ಮಥುರನಾಥನೊಡನೆ ಅವರಿಗಿದ್ದ ನಿಕಟ ಸಂಬಂಧ, ಭವತಾರಿಣೀ ದೇವಿಯ ಪೂಜಾರಿಯಾಗಿದ್ದು ಮುಂತಾದ ಅನೇಕ ದಿವ್ಯಲೀಲೆಗಳ ವಿವರವಿದೆ. ಭಾಗ ೩ ಮತ್ತು ೪ ರಲ್ಲಿ ಶ್ರೀರಾಮಕೃಷ್ಣರ ಗುರುಭಾವ ಹೇಗೆ ವಿಕಾಸ ಗೊಂಡಿತು ಎಂಬುದನ್ನು ಕವಿ ವರ್ಣಿಸುತ್ತಾರೆ. ನರೇಂದ್ರನಾಥರೇ ಮೊದಲಾದ ಶಿಷ್ಯರ ಸಮಾಗಮ, ಅವರಿಗೆ ಶಿಕ್ಷಣ, ನರೇಂದ್ರರನ್ನು ನಾಯಕರನ್ನಾಗಿ ಮಾಡಿದ್ದು, ಮುಂದಿನ ಸಂಘ ನಿರ್ಮಾಣಕ್ಕೆ ಅವರಿಗೆ ಆದೇಶವಿತ್ತ ವಿಚಾರ – ಇವುಗಳನ್ನು ವಿವರಿಸಲಾಗಿದೆ. ಐದನೆಯ ಭಾಗದಲ್ಲಿ ಶ್ರೀರಾಮಕೃಷ್ಣರ ದಿವ್ಯಲೀಲೆಯ ಕೊನೆಯ ಅಂಕವಾದ ಕಾಶೀಪುರ ತೋಟದ ಮನೆಯಲ್ಲಿ ವಾಸ, ಖಾಯಿಲೆ, ಔಷಧೋಪಚಾರ, ಭಕ್ತರು ಯಾವ ರೀತಿ ಗುರು ಗಳನ್ನು ಸೇವಿಸಿದರು ಮುಂತಾದವುಗಳ ವರ್ಣನೆಯಿದೆ. ಜನವರಿ ೧, ೧೮೮೬ ರಂದು ಶ್ರೀರಾಮಕೃಷ್ಣರು ಕಲ್ಪತರುವಾಗಿದ್ದು, ತದನಂತರದ ಅವರ ಮಹಾಸಮಾಧಿ – ಮುಂತಾದುವನ್ನು ನಾವಿಲ್ಲಿ ಕಾಣುತ್ತೇವೆ.

### ದಿವ್ಯಲೀಲಾ ಸ್ಮರಣೆ

ಪೂಂಥಿಯ ಅನೇಕ ಕಡೆ ಶ್ರೀರಾಮಕೃಷ್ಣರ ದಿವ್ಯಲೀಲೆಗಳನ್ನು ಬಹು ಸುಂದರವಾಗಿ, ಮನೋಜ್ಞವಾಗಿ ಅಕ್ಷಯರು ಚಿತ್ರಿಸಿ ದ್ದಾರೆ. ಅವುಗಳಲ್ಲಿ ಕೆಲವನ್ನು ನಾವಿಲ್ಲಿ ನೋಡೋಣ. ಭಾಗ ಒಂದು, ನಾಲ್ಕನೆಯ ಅಧ್ಯಾಯದಲ್ಲಿ ಯಾವ ರೀತಿ ಬಾಲಕ ಗದಾಧರ ತಮ್ಮ ತಂದೆಯು ರಘುವೀರನ ಪೂಜೆಗೆಂದು ಸಿದ್ಧ ಮಾಡಿಕೊಂಡಿದ್ದ ಹೂಮಾಲೆಯನ್ನು ತಾನೇ ಧರಿಸಿದನೆಂಬ ವಿವರಣೆಯಿದೆ. ಕ್ಷುದಿರಾಮರು ಸ್ವಪ್ನದಲ್ಲಿ ನಿರ್ದೇಶನ ಪಡೆದು ಗಳಿಸಿದಂತಹ ರಘುವೀರ ಸಾಲಗ್ರಾಮವನ್ನು ಅತ್ಯಂತ ನಿಷ್ಠೆಯಿಂದ ಪೂಜೆ ಮಾಡುತ್ತಿದ್ದರು. ಒಂದು ದಿನ ಸುಂದರ ವಾದ ಹೂಮಾಲೆಯನ್ನು ತಯಾರು ಮಾಡಿ ಚಂದನದಿಂದ

ಲೇಪಿಸಿ, ಪೂಜೆ ಮಾಡಲು ಕುಳಿತರು, ತುಸು ಹೊತ್ತಿಗೇ ಗಾಢವಾದ ಧ್ಯಾನದಲ್ಲಿ ತಲ್ಲೀನರಾಗಿ ಹೋದರು. ಆಗ ಬಾಲಕ ಗದಾಧರನಿಗೆ ರಘುವೀರನಿಗಾಗಿ ತೆಗೆದಿರಿಸಿದ್ದ ಹೂಮಾಲೆಯನ್ನು ತಾನು ಧರಿಸಬೇಕೆಂಬ ಆಸೆ ಉಂಟಾಯಿತು. ತಕ್ಷಣ ಅಲ್ಲಿಗೆ ಬಂದು ಆ ಮಾಲೆಯನ್ನು ಧರಿಸಿ ಚಂದನ ಲೇಪಿಸಿಕೊಂಡು, "ಅಪ್ಪಾ ನೋಡಿ, ಯಾವ ರೀತಿ ರಘುವೀರ ಮಾಲೆ ಧರಿಸಿದ್ದಾನೆ" ಎಂದು ನಗುತ್ತಾನೆ.

ಎರಡನೆಯ ಭಾಗದ ೧೨ ನೆಯ ಅಧ್ಯಾಯವಾದ 'ಯೋಗಸಾಧನೆ' ಎಂಬಲ್ಲಿ ಅಕ್ಷಯಕುಮಾರರು ಹೀಗೆ ಬರೆಯುತ್ತಾರೆ: ಶ್ರೀರಾಮಕೃಷ್ಣರು ತೋತಾಪುರಿಗಳಿಂದ ಅದ್ವೈತ ದೀಕ್ಷೆಯನ್ನು ಪಡೆಯುವ ಮುನ್ನ ಒಂದು ದಿನ ಬಂದು ಅಶ್ವತ್ಥವೃಕ್ಷದ ಕೆಳಗೆ ಕುಳಿತಿದ್ದಾರೆ. ಆಗ ಅವರು ಆ ವೃಕ್ಷದ ಒಂದು ಕೊಂಬೆಯ ಮೇಲೆ ಒಂದೇ ರೀತಿಯ ಎರಡು ಪಕ್ಷಿಗಳು ಕುಳಿತಿರುವುದನ್ನು ಕಂಡರು. ಅವುಗಳಲ್ಲಿ ಒಂದು ಪಕ್ಷಿ ಶಾಂತವಾಗಿದೆ, ನಿಶ್ಚಲವಾಗಿದೆ; ಆದರೆ ಇನ್ನೊಂದು ಪಕ್ಷಿ ಅಸ್ಥಿರವಾಗಿದೆ, ಅಶಾಂತವಾಗಿದೆ. ಅದರ ಭಾವಕ್ಕೆ ಅನುಗುಣವಾಗಿ ಅಲ್ಲಿಂದ ಇಲ್ಲಿಗೆ ಹಾರುತ್ತಿದೆ; ಆಗಾಗ ಅದೇ ಕೊಂಬೆಯ ಮೇಲೆ ನಿಶ್ಚಲವಾಗಿ ಕುಳಿತಿರುವ ಇನ್ನೊಂದು ಹಕ್ಕಿಯನ್ನು ಎಡೆಬಿಡದೆ ನೋಡುತ್ತಿದೆ. ಇದನ್ನು ಕಂಡು ಶಾಂತವಾಗಿ ಕುಳಿತಿದ್ದ ಆ ಹಕ್ಕಿ ತನ್ನ ಬಾಯಿಯನ್ನು ತೆರೆದಿತ್ತು. ಆಗ ಅಶಾಂತವಾದ ಇನ್ನೊಂದು ಹಕ್ಕಿ ಅದರ ಬಾಯೊಳಗೆ ಪ್ರವೇಶ ಮಾಡಿತು. ಇದನ್ನು ಕಂಡು ವಿಸ್ಮಿತರಾದ ಶ್ರೀರಾಮಕೃಷ್ಣರು ಇದೇನೆಂದು ಯೋಚಿಸತೊಡಗಿದರು. ಆಗ ಅವರ ಮನದಲ್ಲಿ ಆತ್ಮ ಪರಮಾತ್ಮರ ವಿಚಾರವಾಗಿ ಯೋಚನೆ ಬಂತು. ಅಶಾಂತವಾದ ಹಕ್ಕಿ ಜೀವಾತ್ಮ. ಸುಖ, ದುಃಖ, ನೋವು, ನಲಿವು, ಕಣ್ಣೀರು, ನಗು ಮುಂತಾದ ಭಾವಗಳು ಅದನ್ನು ಅಸ್ಥಿರವನ್ನಾಗಿ ಮಾಡಿದೆ. ಪರಮಾತ್ಮನು ಸಾಕ್ಷೀ ಸ್ವರೂಪ. ಅವನು ಶಾಂತನೂ, ಸ್ಥಿರನೂ, ಜಗತ್ತಿನ ಎಲ್ಲ ವ್ಯವಹಾರಗಳನ್ನು ವೀಕ್ಷಿಸುವವನೂ ಆಗಿದ್ದಾನೆ. ಈ ಪರಬ್ರಹ್ಮ ವಸ್ತುವಿನ ಸ್ವರೂಪವನ್ನು ನೋಡಲು ಶ್ರೀರಾಮಕೃಷ್ಣರು ಬಯಸಿದರು. ಆ ಸಮಯದಲ್ಲಿಯೇ ನಿರ್ಗುಣ–ನಿರಾಕಾರ ಪರಬ್ರಹ್ಮ ಸತ್ಯವನ್ನು ಅವರಿಗೆ ಉಪದೇಶಿಸಲು ತೋತಾಪುರಿಗಳು ಅವರೆಡೆಗೆ ಬಂದರು. ಈ ಎರಡು ಹಕ್ಕಿಗಳ ವಿವರಣೆ ನಮಗೆ ಮುಂಡಕೋಪನಿಷತ್ತಿನ *"ದ್ವಾ ಸುಪರ್ಣಾ ಸಯುಜಾ ಸಖಾಯಾ"* ಎಂಬ ಪ್ರಸಿದ್ಧ ಮಂತ್ರವನ್ನು ನೆನಪಿಗೆ ತರುತ್ತದೆ.

ಎರಡನೆಯ ಭಾಗದ 'ಶ್ರೀರಾಮಕೃಷ್ಣರು ವಿವಿಧ ಭಾವಗಳಲ್ಲಿ' ಎಂಬ ಹೆಸರಿನ ೧೬ ನೆಯ ಅಧ್ಯಾಯದಲ್ಲಿ ಅಕ್ಷಯಕುಮಾರರು ಹೀಗೆ ಬರೆಯುತ್ತಾರೆ: ಶ್ರೀರಾಮಕೃಷ್ಣರು ಹಲವೊಮ್ಮೆ ಚಪ್ಪಾಳೆ ತಟ್ಟುತ್ತಾ 'ಹರಿ, ಹರಿ' ಎಂದು ಹರಿಯ ಗುಣಗಾನ ಮಾಡುತ್ತ ಇರುತ್ತಾರೆ. ಇನ್ನೊಮ್ಮೆ ಅತ್ಯಂತ ಎತ್ತರದ ಸ್ವರದಲ್ಲಿ 'ಕಾಳೀ' ಎಂದು ಕರೆಯುತ್ತಾರೆ ಹಾಗೂ ದಿವ್ಯಭಾವದಲ್ಲಿ ಆಕೆಯ ಗುಡಿಯನ್ನು ಪ್ರವೇಶ ಮಾಡುತ್ತಾರೆ. ಅಲ್ಲಿ ಕುಳಿತು ಮಧುರವಾದ ಕಂಠದಿಂದ ಆಕೆಯ ಬಗೆಗಿನ ಹಾಡುಗಳನ್ನು ಹಾಡುತ್ತಾರೆ; ಕಾಲಿಗೆ ಕಾಲಂದಿಗೆ ಹಾಕಿಕೊಂಡು ಸ್ತ್ರೀಯರಂತೆ ವೇಷ ಧರಿಸಿ, ದಿವ್ಯಭಾವದಲ್ಲಿ ಕಾಳಿಕಾದೇವಿಗೆ ಚಾಮರ ಬೀಸುತ್ತಾರೆ. ಇನ್ನೊಮ್ಮೆ ಬೆಣ್ಣೆಯನ್ನು ಕಡೆದು ತೆಗೆದು ಆ ಹೊಸ ಬೆಣ್ಣೆಯನ್ನು ಆಕೆಯ ಬಾಯಿಗೆ ಇಡುತ್ತಾರೆ; ಮತ್ತೊಮ್ಮೆ ಮುಗ್ಧ ಶಿಶುವಿನಂತೆ ತಾಯಿಯೊಡನೆ ಜಗಳವಾಡುತ್ತಾರೆ; ಮಗದೊಮ್ಮೆ ನಗುತ್ತಾರೆ. ತಮ್ಮ ಕೆನ್ನೆಯನ್ನು ಕೈಯಿಂದ ತಟ್ಟಿಕೊಂಡು, 'ಹರ ಹರ ಶಿವ ವ್ಯೋಂ ವ್ಯೋಂ' ಎನ್ನುತ್ತಾರೆ. ಮತ್ತೊಂದು ಸಲ ಸಮಾಧಿಸ್ಥಿತಿಯಲ್ಲಿ ಅನೇಕ ಸಮಯ ಕಳೆಯುತ್ತಾರೆ. ಶಾಂತರಾಗಿ ಕುಳಿತು ಜಪತಪ ಮಾಡುತ್ತಾ, ತಾವು ಹೇಗೆ ದುಃಖಿತರಾದ ಜನರಿಗೆ ಸಹಾಯಮಾಡುವುದು ಎಂಬುದಾಗಿ ಚಿಂತಿಸುತ್ತಾರೆ. ಒಮ್ಮೆ ವಿಷ್ಣು ದೇವಾಲಯಕ್ಕೆ ಹೋಗಿ ಅಲ್ಲಿ ದೇವರಿಗಾಗಿ ಹಾಡು ಹಾಡುತ್ತಾರೆ; ಒಮ್ಮೆ ರಾಧೆಯ ಉಡುಪನ್ನು ಕೃಷ್ಣನಿಗೂ, ಕೃಷ್ಣನ ಉಡುಪನ್ನು ರಾಧೆಗೂ ಉಡಿಸಿ ನಲಿಯುತ್ತಾರೆ. ರಾಧೆಯ ಕೈಗೆ ಕೊಳಲು ಕೊಟ್ಟು ಸಂತೋಷಪಡುತ್ತಾರೆ. ಮತ್ತೆ ರಾಮಲಾಲನ ಕಂಚಿನ ವಿಗ್ರಹವನ್ನು ಕೈಯಲ್ಲಿ ಹಿಡಿದುಕೊಂಡು ತಮ್ಮ ಪ್ರಾಣಕ್ಕೆ ಪ್ರಾಣನಾದ ಶ್ರೀರಾಮನ ಹೆಸರನ್ನು ಮಧುರವಾಗಿ ಜಪಿಸುತ್ತಾರೆ. ವೇದಾಂತವಾದಿಗಳೊಡನೆ ದಕ್ಷಿಣೇಶ್ವರ ದೇವಸ್ಥಾನದಲ್ಲಿ ಕುಳಿತು ಗಂಟೆಗಳ ಕಾಲ ವಾದವಿವಾದ ಮಾಡುತ್ತಾರೆ. ಹಲವಾರು ತಿಂಗಳು ನಿರ್ವಿಕಲ್ಪ ಸಮಾಧಿಯಲ್ಲಿ ಕಳೆಯುತ್ತಾರೆ. ಕೆಲವು ಸಮಯ ಪುರಾಣ ಇತಿಹಾಸಗಳನ್ನು ಇತರರಿಗೆ ವಿವರಿಸುತ್ತಾರೆ. ಒಮ್ಮೆ ಶುದ್ಧ ಭಕ್ತಿಯ ಕುರಿತಾಗಿ ಹೇಳಿದರೆ, ಮತ್ತೊಮ್ಮೆ ಜ್ಞಾನದ ಪರಾಕಾಷ್ಠತೆಯನ್ನು ಹೊಗಳುತ್ತಾರೆ. ಒಮ್ಮೆ ಭಕ್ತಿಶಾಸ್ತ್ರದ ಪಂಚಭಾವದ ಕುರಿತಾಗಿ ಹೇಳುತ್ತಾರೆ. ಇನ್ನೊಮ್ಮೆ ಸಾಧಕರ, ಪ್ರೇಮೀಭಕ್ತರ ಕುರಿತಾಗಿ ಮಾತನಾಡುತ್ತಾರೆ. ಒಮ್ಮೆ ಶ್ರೀಕೃಷ್ಣ ಚೈತನ್ಯರ ನಾಮಗುಣ ಸಂಕೀರ್ತನೆ ಮಾಡಿ ನರ್ತಿಸುತ್ತಾರೆ, ಅನಂತರ ತಾಂತ್ರಿಕ ಭಕ್ತಿಯ ಹಾಗೂ ಭಕ್ತರ ಕುರಿತಾಗಿ ಹೇಳುತ್ತಾರೆ. ಅವರ ಉಪದೇಶ ಅತ್ಯಂತ ಹೃದಯಸ್ಪರ್ಶಿಯೂ, ಸರಳವೂ, ಉದಾರವೂ, ಸಾಧನೆಯ ಮಾರ್ಗದಲ್ಲಿ ಬಹು ಶ್ರೇಯಸ್ಕರವಾಗಿಯೂ ಇರುವುದಾಗಿದೆ – ಹೀಗೆ ಹಲವಾರು ವಿಧದಿಂದ ಶ್ರೀರಾಮಕೃಷ್ಣರ ಲೀಲೆಗಳನ್ನು ಹೃದಯಂಗಮವಾಗಿ ಅಕ್ಷಯರು ಪೂಂಥಿಯಲ್ಲಿ ವರ್ಣಿಸುತ್ತಾರೆ.

ಈ ರೀತಿಯಾಗಿ ನಾವು ಅನೇಕ ರೋಮಾಂಚಕರವಾದ ಕಥೆಗಳನ್ನು, ಘಟನೆಗಳನ್ನು ಶ್ರೀರಾಮಕೃಷ್ಣ ಪೂಂಥಿಯಲ್ಲಿ ಕಾಣುತ್ತೇವೆ. ಭಗವಾನ್ ಶ್ರೀರಾಮಕೃಷ್ಣರ ದಿವ್ಯ ಲೀಲೆಯನ್ನು, ಸಾಧಕರಿಗೆ, ಭಕ್ತರಿಗೆ, ಹಲವಾರು ವಿಧದಲ್ಲಿ ಮನಮುಟ್ಟುವಂತೆ ವಿವರಿಸಿ ಅಕ್ಷಯಕುಮಾರ ಸೇನರು ನಿಜಕ್ಕೂ ಸರ್ವದಾ ವಂದನೀಯರಾಗಿದ್ದಾರೆ.